# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -2
## S.S.L.C. MODEL QUESTION PAPER-2 : 2024-25

## ವಿಷಯ : ತೃತೀಯ ಭಾಷೆ — ಕನ್ನಡ
## Subject : Third Language — KANNADA

**ವಿಷಯ ಸಂಕೇತ : 62-K** **Subject Code : 62-K**

ಸಮಯ : 3 ಗಂಟೆ ] [ Time : 3 Hours

ಗರಿಷ್ಠ ಅಂಕಗಳು : 80 ] [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳ ಸಂಖ್ಯೆ

   (ಎ) ೦೫ (ಬಿ) ೦೬

   (ಸಿ) ೦೭ (ಡಿ) ೦೯

2. 'ನೀವು' ಪದವು ಈ ಸರ್ವನಾಮಕ್ಕೆ ಉದಾಹರಣೆಯಾಗಿದೆ

   (ಎ) ಉತ್ತಮ ಪುರುಷ (ಬಿ) ಮಧ್ಯಮ ಪುರುಷ

   (ಸಿ) ಪ್ರಥಮ ಪುರುಷ (ಡಿ) ಅನ್ಯಪುರುಷ

3. ಮೀನು ನೀರಲ್ಲಿ ಈಜುತ್ತದೆ – ಇಲ್ಲಿ ಬಂದಿರುವ 'ನೀರಲ್ಲಿ' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ

   (ಎ) ಪ್ರಥಮಾ ವಿಭಕ್ತಿ (ಬಿ) ತೃತೀಯಾ ವಿಭಕ್ತಿ

   (ಸಿ) ಪಂಚಮೀ ವಿಭಕ್ತಿ (ಡಿ) ಸಪ್ತಮೀ ವಿಭಕ್ತಿ

4. ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ

   (ಎ) ಆವರಣ ಚಿಹ್ನೆ (ಬಿ) ಭಾವಸೂಚಕ ಚಿಹ್ನೆ

   (ಸಿ) ಉದ್ಧರಣ ಚಿಹ್ನೆ (ಡಿ) ಪ್ರಶ್ನಾರ್ಥಕ ಚಿಹ್ನೆ

5. ಕೆಳಗಿನವುಗಳಲ್ಲಿ ದ್ವಿಗು ಸಮಾಸಕ್ಕೆ ಉದಾಹರಣೆ

   (ಎ) ಅರಮನೆ (ಬಿ) ಹಿಂದಲೆ

   (ಸಿ) ಹಳೆಗನ್ನಡ (ಡಿ) ಒಗ್ಗಟ್ಟು

6. ಸಮುದ್ರದ ದೊಡ್ಡ ದೊಡ್ಡ ಅಲೆಗಳು ರಪರಪನೆ ದಡಕ್ಕೆ ಅಪ್ಪಳಿಸಿತು. ಈ ವಾಕ್ಯದಲ್ಲಿ ಅನುಕರಣಾವ್ಯಯಕ್ಕೆ ಉದಾಹರಣೆಯಾದ ಪದ

(ಎ) ದೊಡ್ಡ ದೊಡ್ಡ
(ಬಿ) ರಪ ರಪನೆ
(ಸಿ) ದಡಕ್ಕೆ
(ಡಿ) ಅಲೆಗಳು

7. ಕೆಳಗಿನವುಗಳಲ್ಲಿ ಯಣ್ ಸಂಧಿಗೆ ಉದಾಹರಣೆಯಾಗಿರುವ ಪದ

(ಎ) ರಾಜ್ಯೋತ್ಸವ
(ಬಿ) ತಲೆಯನ್ನು
(ಸಿ) ಜಾತ್ಯತೀತ
(ಡಿ) ಏಕೈಕ

8. ಪ್ರಕೃತಿಯನ್ನು ಪೂಜಿಸುವ ಪೂಜಾರಿಗಳಾಗುವ ಬದುಕು ನಮ್ಮದಾಗಬೇಕು. – ಇಲ್ಲಿ ಬಂದಿರುವ ಅನ್ವರ್ಥಕನಾಮ ಪದ

(ಎ) ಪೂಜಾರಿ
(ಬಿ) ಪ್ರಕೃತಿ
(ಸಿ) ಬದುಕು
(ಡಿ) ಪೂಜಿಸುವ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4**

9. ಕುಲಕರ್ಣಿಯ ಕೈಯಲ್ಲಿ : ಪಿಸ್ತೂಲ್ :: ರಾಮ್‌ಸಿಂಗ್‌ನ ಕೈಯಲ್ಲಿ : .........................

10. ಮರಳಿ ಮಣ್ಣಿಗೆ : ಶಿವರಾಮ ಕಾರಂತ :: ಯಕ್ಷಪ್ರಶ್ನೆ : .......................

11. ನುಚ್ಚುನೂರಾಗುವುದು : ನನ್ನ ಅಹಂಕಾರ :: ಮುದುಡಿ ಹೋಗುವುದು : ................

12. ಅರಿವೆಯ ಮುಸುಕನು : ಮೋರೆಗೆ ಹಾಕಿ :: ನಾಟಕ ಸ್ತ್ರೀಯಂತೆ : .........................

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4**

13. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?

14. ಬಸವಣ್ಣನವರ ವಚನಗಳ ಅಂಕಿತನಾಮವೇನು ?

15. ಕಂಬಳಿಹುಳುವಿನ ಆಸೆ ಏನು ?

16. ನಾಗೇಶ ಹೆಗಡೆಯವರು ಹೈಸ್ಕೂಲ್ ಶಿಕ್ಷಣವನ್ನು ಎಲ್ಲಿ ಪಡೆದರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಗೊರೂರರು ಮಿನಿಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ಏಕೆ ತಪ್ಪಿಸಿಕೊಂಡರು ?

18. ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ.

19. ತುಳಜಾಬಾಯಿಯ ದೇಶ ಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.

20. ಕಿತ್ತೂರು ಚೆನ್ನಮ್ಮ ಸೆರೆಯಾಗಲು ಕಾರಣವೇನು ?

21. ನವಯುಗದ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರವನ್ನು ವಿವರಿಸಿ.

22. ರೈತನು ದನಕರುಗಳ ಬಗ್ಗೆ ಮಳೆದೇವರಲ್ಲಿ ಮಾಡಿಕೊಳ್ಳುವ ನಿವೇದನೆಯನ್ನು ಕುರಿತು ಬರೆಯಿರಿ.

23. ಸ್ವಾತಿ ಮಳೆಯು ರೈತನ ಸಂತೋಷಕ್ಕೆ ಕಾರಣವಾದ ಬಗೆಯನ್ನು ವಿವರಿಸಿ.

24. ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆಗಳು ಯಾವುವು ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು."

26. "ನಾವು ವಿಲಯ ರುದ್ರರು."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ, ಸಮರ್ಥಿಸಿ.

28. ಶಿವಾಜಿಯು ಮಲ್ಲಮ್ಮಾಜಿಯೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

29. ಬಸವಣ್ಣನವರು ನಡೆನುಡಿಗಳ ಬಗ್ಗೆ ತಿಳಿಸಿದ ಮೌಲ್ಯಗಳನ್ನು ಬರೆಯಿರಿ.

30. ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಎಂದೆನಿಸುವ ಪೂಜೆಯನ್ನು ಹೇಗೆ ವಿವರಿಸಿದ್ದಾರೆ ?

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

31. ಗೊರೂರು ರಾಮಸ್ವಾಮಿ ಅಯ್ಯಂಗಾರ್

32. ಡಾ. ಸಿ.ಪಿ. ಕೃಷ್ಣಕುಮಾರ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** **1 × 3 = 3**

33. "ದೇಶ ಸುತ್ತು ಕೋಶ ಓದು"

**ಅಥವಾ**

"ಹಾಸಿಗೆ ಇದ್ದಷ್ಟು ಕಾಲು ಚಾಚು."

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **1 × 4 = 4**

34. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.

**ಅಥವಾ**

"ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು" – ಈ ಹೇಳಿಕೆಯನ್ನು ಸಮರ್ಥಿಸಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

35. ನಾವು ..................................................................

..........................................................................

..........................................................................

................................................................. ಇಂದೆ.

**ಅಥವಾ**

ಕರ್ನಾಟಕ ..............................................................

..........................................................................

..........................................................................

................................................................. ಒಂದೆ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4**

36. ವಿವಿಧ ಧರ್ಮಗಳ ಬೀಡಾಗಿರುವ ಭಾರತದ್ದು ವೈವಿಧ್ಯಮಯ ಸಂಸ್ಕೃತಿ. ವಿವಿಧ ಧರ್ಮಗಳ ಹಲವು ಹಬ್ಬ-ಹರಿದಿನಗಳನ್ನು ಭಾರತದಲ್ಲಿ ಆಚರಿಸಲಾಗುತ್ತದೆ. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮತ್ತು ಗಾಂಧೀ ಜಯಂತಿ, ಇವು ಭಾರತದ ಘೋಷಿತ ರಾಷ್ಟ್ರೀಯ ಹಬ್ಬಗಳು ಇವುಗಳನ್ನು ಶ್ರದ್ಧೆ ಮತ್ತು ಉತ್ಸಾಹದಿಂದ ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತದೆ. ಇದಲ್ಲದೆ ಹಲವು ರಾಜ್ಯಗಳು ಚಾಲ್ತಿಯಲ್ಲಿರುವ ಅಲ್ಲಿನ ಭಾಷೆ ಮತ್ತು ಧರ್ಮವನ್ನು ಅನುಸರಿಸಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿವಿಧ ಸ್ಥಳೀಯ ಹಬ್ಬಗಳನ್ನು ಆಚರಿಸುತ್ತವೆ. ದೀಪಾವಳಿ, ಗಣೇಶ ಚತುರ್ಥಿ, ದುರ್ಗಾಪೂಜಾ, ಹೋಳಿ, ರಕ್ಷಾಬಂಧನ ಮತ್ತು ದಸರಾ – ಇವು ಇಲ್ಲಿನ ಜನಪ್ರಿಯ ಹಿಂದೂ ಧರ್ಮದ ಹಬ್ಬಗಳು. ಸಂಕ್ರಾತಿ, ಪೊಂಗಲ್ ಮತ್ತು ಓಣಂ ಹಬ್ಬಗಳು ಸಮೃದ್ಧತೆಯ ಸಂಕೇತವಾಗಿ ಸುಗ್ಗಿಯ ಹಬ್ಬಗಳೆಂದು ಆಚರಿಸಲ್ಪಡುತ್ತವೆ. ವಿವಿಧ ಧರ್ಮಿಯರು ಆಚರಿಸುವ ಕೆಲವು ನಿರ್ದಿಷ್ಟ ಹಬ್ಬಗಳು ಭಾರತದಲ್ಲುಂಟು. ಮಹತ್ವದ ಹಬ್ಬವೆನಿಸಿರುವ ದೀಪಾವಳಿಯನ್ನು ಹಿಂದೂ, ಸಿಖ್, ಜೈನ ಧರ್ಮಿಯರು ಆಚರಿಸಿದರೆ, ಬುದ್ಧ ಪೂರ್ಣಿಮೆಯನ್ನು ಜೈನ ಮತ್ತು ಬೌದ್ಧರು ಆಚರಿಸುತ್ತಾರೆ. ಮುಸ್ಲಿಂ ಹಬ್ಬಗಳಾದ ಈದ್-ಉಲ್-ಫಿತರ್, ಈದ್ ಅಲ್-ಅಧಾ ಮತ್ತು ರಂಜಾನ್ ಹಬ್ಬಗಳನ್ನು ಭಾರತದಾದ್ಯಂತ ಮುಸ್ಲಿಂ ಬಾಂಧವರು ಸಂಭ್ರಮದಿಂದ ಆಚರಿಸುತ್ತಾರೆ. ಭಾರತದ ಪೂರ್ವದಿಕ್ಕಿನ ಗಡಿರಾಜ್ಯವಾದ ಅರುಣಾಚಲ ಪ್ರದೇಶದ ಜೈರೋ ಕಣಿವೆಯ ಅಪಾಟಾನಿಸ್ ಬುಡಕಟ್ಟು ಜನ ಆಚರಿಸುವ ಡ್ರೀ ಹಬ್ಬ ಭಾರತದ ಬುಡಕಟ್ಟು ಜನರ ಹಬ್ಬಗಳಲ್ಲೊಂದಾಗಿದ್ದು, ಭಾರತೀಯ ಸಂಸ್ಕೃತಿಗೆ ಮತ್ತಷ್ಟು ಮೆರಗು ನೀಡಿದೆ.

***ಪ್ರಶ್ನೆಗಳು :***

ಎ) ಭಾರತದ ಘೋಷಿತ ರಾಷ್ಟ್ರೀಯ ಹಬ್ಬಗಳಾವುವು ?

ಬಿ) ಅರುಣಾಚಲ ಪ್ರದೇಶದ ಜೈರೋ ಕಣಿವೆಯ ಬುಡಕಟ್ಟು ಜನಾಂಗ ಯಾವುದು ?

ಸಿ) ಸಂಕ್ರಾತಿ, ಪೊಂಗಲ್ ಮತ್ತು ಓಣಂ ಹಬ್ಬಗಳನ್ನು ಸುಗ್ಗಿ ಹಬ್ಬಗಳೆಂದು ಏಕೆ ಕರೆಯುತ್ತಾರೆ ?

ಡಿ) ಭಾಷೆ ಮತ್ತು ಧರ್ಮವನ್ನು ಅನುಸರಿಸಿ ಆಚರಿಸುವ ಹಬ್ಬಗಳು ಯಾವುವು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 4 = 4**

37. ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಸಾಧನೆ.

**ಅಥವಾ**

ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ಕ್ರೀಡೆಗಳ ಪಾತ್ರ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

38. ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ 'ಗೌತಮ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಶಾಲಾ ಗ್ರಂಥಾಲಯವನ್ನು ಸ್ಥಾಪಿಸಿಕೊಡುವಂತೆ ಕೋರಿ ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಹಬ್ಬಳಿಯ ಸರ್ಕಾರಿ ಪ್ರೌಢಶಾಲೆಯ 'ಪಾರಿಜಾತ' ಎಂದು ಭಾವಿಸಿಕೊಂಡು, ಶಾಲಾ ಶೈಕ್ಷಣಿಕ ಪ್ರವಾಸದ ಅನುಭವವನ್ನು ವಿವರಿಸುತ್ತಾ ಶಿರಸಿಯಲ್ಲಿ ವಾಸವಾಗಿರುವ ಗೆಳೆಯ 'ಆನಂದ'ನಿಗೆ ಒಂದು ಪತ್ರವನ್ನು ಬರೆಯಿರಿ.